**ಅಸಲು ದಾವಾ ನಂ:239/2021**
**ಪಿ.ಡಬ್ಲ್ಯೂ:01**

**ದಿನಾಂಕ: 27-03-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಡಿ ಜೆ ಆರ್ ಪ್ರತಿವಾದಿ ಪರ ವಕೀಲರಿಂದ**

1994 ರಲ್ಲಿ ಆದ ಮೊದಲ ನೋಂದಾಯಿತ ಪಾಲುವಿಭಾಗ ಪತ್ರದಲ್ಲಿ ದಾವಾ ಅನುಸೂಚಿ ಸ್ವತ್ತನ್ನು ಕುಟುಂಬ ನಿರ್ವಹಣೆಗಾಗಿ ಸದರಿ ಸ್ವತ್ತನ್ನು ಒಟ್ಟು ಕುಟುಂಬದ ಆಸ್ತಿಯಲ್ಲಿ ಉಳಿಸಲಾಗಿತ್ತು ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತು ನನ್ನ ತಾತ ಗಿಡ್ಡಯ್ಯ ಮತ್ತು ನನ್ನ ತಾತನ ಅಣ್ಣನಾದ ಬಾಲಯ್ಯ ಹಾಗೂ ತಮ್ಮನಾದ ಚೆನ್ನಪ್ಪ ರವರ ಎಲ್ಲಾ ವಾರಸುದಾರರ ಹೆಸರಿನಲ್ಲಿ ಜಂಟಿ ಹಕ್ಕು ಇದೆ ಎಂದರೆ ಸರಿ. ನನ್ನ ತಾತ ಗಿಡ್ಡಯ್ಯನಿಗೆ 4 ಜನ ಮಕ್ಕಳು ಜನಿಸಿರುತ್ತಾರೆ ಎಂದರೆ ಸರಿ. 1 ನೇ ಬಾಲಪ್ಪ, 2 ನೇ ಸಣ್ಣ ಬಾಲಪ್ಪ ಯಾನೆ ಗುಮ್ಮನ್ನ, 3 ನೇ ಚೆನ್ನಪ್ಪ ಮತ್ತು 4 ನೇ ಸಣ್ಣ ಕೆಂಗಪ್ಪ ಆಗಿರುತ್ತಾರೆ.

ನನ್ನ ತಂದೆ 1 ನೇ ಬಾಲಪ್ಪನಿಗೆ ನಾವು 4 ಜನ ಮಕ್ಕಳು ಜನಿಸಿರುತ್ತೇವೆ. ನಾನು ಮೊದಲನೆ ಮಗ, ಎರಡನೇ ಮಗ ಶಿವಣ್ಣ, ಮೂರನೇ ಮಗ ಶಂಕರಣ್ಣ ಮತ್ತು ನಾಲ್ಕನೇ ಮಗ ತಿಪ್ಪೇಸ್ವಾಮಿ ಆಗಿರುತ್ತೇವೆ. ಪ್ರಸ್ತುತ ದಾವೆಯಲ್ಲಿ ಎರಡನೇ ಮಗ ಶಿವಣ್ಣ, ಮೂರನೇ ಮಗ ಶಂಕರಣ್ಣ ಮತ್ತು ನಾಲ್ಕನೇ ಮಗ ತಿಪ್ಪೇಸ್ವಾಮಿ ರವರುಗಳನ್ನು ಸೇರಿಸಿರುವುದಿಲ್ಲ ಎಂದರೆ ಸರಿ.

2 ನೇ ಸಣ್ಣ ಬಾಲಪ್ಪ ಯಾನೆ ಗುಮ್ಮನ್ನರವರಿಗೆ ಮೂರು ಜನ ಮಕ್ಕಳು ಜನಿಸಿರುತ್ತಾರೆ. ಅವರುಗಳೆಂದರೆ ಚೆನ್ನಪ್ಪ, ಕರಿಬಾಲಪ್ಪ ಮತ್ತು ಭೂತಬಾಲಪ್ಪ ಆಗಿರುತ್ತಾರೆ ಎಂದರೆ ಸರಿ. ಸದರಿ ಮೂರು ಜನ ಮಕ್ಕಳನ್ನು ಪ್ರಸ್ತುತ ದಾವೆಯಲ್ಲಿ ನಾನು ಸೇರಿಸಿರುವುದಿಲ್ಲ ಎಂದರೆ ಸರಿ.

3 ನೇ ಚೆನ್ನಪ್ಪ ಮೂರು ಜನ ಮಕ್ಕಳು ಜನಿಸಿರುತ್ತಾರೆ. ಅವರುಗಳೆಂದರೆ ಈರಣ್ಣ, ಗೋಪಾಲ ಮತ್ತು ತಿಪ್ಪೇಸ್ವಾಮಿ ಆಗಿರುತ್ತಾರೆ ಎಂದರೆ ಸರಿ. ಸದರಿ ಮೂರು ಜನ ಮಕ್ಕಳನ್ನು ಪ್ರಸ್ತುತ ದಾವೆಯಲ್ಲಿ ನಾನು ಸೇರಿಸಿರುವುದಿಲ್ಲ ಎಂದರೆ ಸರಿ.

4 ನೇ ಸಣ್ಣ ಕೆಂಗಪ್ಪ ಇಬ್ಬರು ಮಕ್ಕಳು ಜನಿಸಿರುತ್ತಾರೆ. ಅವರುಗಳೆಂದರೆ ಬಾಲರಾಜ ಮತ್ತು ತಿಪ್ಪೇಸ್ವಾಮಿ ಆಗಿರುತ್ತಾರೆ ಎಂದರೆ ಸರಿ. ಸದರಿ ಇಬ್ಬರು ಮಕ್ಕಳನ್ನು ಪ್ರಸ್ತುತ ದಾವೆಯಲ್ಲಿ ನಾನು ಸೇರಿಸಿರುವುದಿಲ್ಲ ಎಂದರೆ ಸರಿ.

ನನ್ನ ತಾತನಾದ ಗಿಡ್ಡಯ್ಯನ ತಮ್ಮನಾದ ಚೆನ್ನಪ್ಪನಿಗೆ ಇಬ್ಬರು ಮಕ್ಕಳು ಜನಿಸಿರುತ್ತಾರೆ. ಅವರುಗಳೆಂದರೆ ದೊಡ್ಡ ಕೆಂಗಪ್ಪ ಮತ್ತು ಸಣ್ಣ ಬಾಲಪ್ಪ ಆಗಿರುತ್ತಾರೆ ಎಂದರೆ ಸರಿ.

ಅವರುಗಳಲ್ಲಿ ಸಣ್ಣಬಾಲಪ್ಪ ಎಂಬುವವರು ಮೃತರಾಗಿರುತ್ತಾರೆ ಎಂದರೆ ಸರಿ. ಸದರಿ ಸಣ್ಣ ಬಾಲಪ್ಪನಿಗೆ ಬಾಲರಾಜ ಎನ್ನುವ ಮಗ ಜನಿಸಿರುತ್ತಾನೆ ಎಂದರೆ ಸರಿ. ಸದರಿ ಬಾಲರಾಜರವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ.

ನಾನು ದಾವಾ ಅನುಸೂಚಿ ಸ್ವತ್ತನ್ನು ಎಲ್ಲಾ ವಾರಸುದಾರರನ್ನು ಪ್ರಸ್ತುತ ದಾವೆಯಲ್ಲಿ ಸೇರಿಸದೆ ಇರುವ ಕಾರಣ ನನ್ನ ದಾವೆ ಕಾನೂನಿನಡಿಯಲ್ಲಿ ಊರ್ಜಿತವಲ್ಲ ಎಂದರೆ ಸರಿ. ಸದರಿ ಎಲ್ಲಾ ವಾರಸುದಾರರಿಗೆ ದಾವಾ ಅನುಸೂಚಿ ಸ್ವತ್ತಿನಲ್ಲಿ ಸಮ ಹಕ್ಕು ಇದೆ ಎಂದರೆ ಸರಿ. ಸದರಿ ವಾರಸುದಾರರನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸದರಿ ಕೋರಿಕೆಯನ್ನು ಅನುಮತಿಸಲಾಯಿತು ಮತ್ತು ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.